# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1057 (1210)
ಸದಸ್ಯರ ಹೆಸರು : ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ : 07.03.2022
ಉತ್ತರಿಸುವವರು : ಅರಣ್ಯ ಹಾಗೂ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಹೊನ್ನಾವರ ತಾಲ್ಲೂಕು ಮಂಕಿ ಹೋಬಳಿ, ಕೆಳಗಿನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರುವ ಮುಗಳಿ ಗ್ರಾಮ ಕಲ್ಲುಬಂಡೆಯಿಂದ ಆವರಿಸಿರುವ ಸಮುದ್ರ ತೀರವನ್ನುಯ ಹೊಂದಿದ್ದು, ಈ ಸುಂದರ ದೃಶ್ಯಗಳು ಜನರನ್ನು ಆಕರ್ಷಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು. |
| ಆ) | ಈ ಪ್ರವಾಸಿ ತಾಣಕ್ಕೆ ಬರುವ ಪ್ರವಾಸಿಗರು/ವಾಯು ವಿಹಾರದ ನೆಪದಲ್ಲಿ ಬರುವವರು ಈ ಪ್ರದೇಶದಲ್ಲಿ ಬಂದು ಮದ್ಯಪಾನ ಮಾಡುವುದು. ಗಾಜಿನ ಬಾಟಲಿಗಳನ್ನು ಎಲ್ಲೆಂದರಲ್ಲಿ ಎಸೆಯುವುದು, ಒಡೆದು ಹಾಕುವುದು ಇತ್ಯಾದಿಯಿಂದಾಗಿ ಅಲ್ಲಿಯ ಪರಿಸರ ನಾಶವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಅರಣ್ಯ ಇಲಾಖೆಯ ವ್ಯಾಪ್ತಿಯಲ್ಲಿನ ಪಾರ್ಕ್ ಪ್ರದೇಶದ ಒಳಗೆ ಬಾಟಲಿಗಳನ್ನು ಎಸೆದು ಪರಿಸರ ನಾಶಮಾಡುವ ಕುರಿತು ಯಾವುದೇ ವರದಿ ಆಗಿರುವುದಿಲ್ಲ. |
| ಇ) | ಹಾಗಿದಲ್ಲಿ, ಅಲ್ಲಿಯ ಪರಿಸರಕ್ಕೆ ಹಾನಿಯಾಗುವುದನ್ನು ತಡೆಯಲು ಸರ್ಕಾರ ಕ್ರಮ ಜರುಗಿಸುವುದೇ? | ಅರಣ್ಯ ಇಲಾಖೆಯ ವ್ಯಾಪ್ತಿಯಲ್ಲಿನ ಮುಗಳಿ ಕೆಳಗಿನೂರು ಅಪ್ಸರಕೊಂಡ ಪರಿಸರ ಪ್ರವಾಸೋದ್ಯಮ ತಾಣದಲ್ಲಿ ಪ್ರವಾಸಿಗರಿಗಾಗಿ ವಿವಿಧ ಸೌಕರ್ಯಗಳನ್ನು ಕಲ್ಪಿಸಲಾಗಿರುತ್ತದೆ. ಹಾಗೂ ಪ್ಲಾಸ್ಟಿಕ್ ಹಾಗೂ ಇನ್ನಿತರ ತ್ಯಾಜ್ಯ ವಸ್ತುಗಳನ್ನು ವಿಲೇವಾರಿಗೆ ಕಸದ ತೊಟ್ಟಿ ಇರಿಸಿ ದಿನಂಪ್ರತಿ ಸ್ವಚ್ಛಗೊಳಿಸಿ ವಿಲೇವಾರಿಗೊಳಿಸಲಾಗುತ್ತದೆ. ಹಾಗೆಯೇ (1) ಪ್ರತಿ ದಿನ ಸೂರ್ಯಾಸ್ತದ ನಂತರ ಪಾರ್ಕ್ ಅನ್ನು ಬಂದ್ ಮಾಡಿ ಸಾರ್ವಜನಿಕರಿಗೆ ಪ್ರವೇಶವನ್ನು ನಿಷೇಧಿಸಲಾಗುತ್ತದೆ. (2) ಪಾರ್ಕಿನಲ್ಲಿ ಸಿ.ಸಿ.ಟಿವಿಗಳನ್ನು ಅಳವಡಿಸಲಾಗಿರುತ್ತದೆ. (3) ಪ್ರತಿ ದಿನ ರಾತ್ರಿ ಕಾವಲುಗಾರರಿದ್ದು ರಾತ್ರಿ ಕಾವಲು ಮಾಡುತ್ತಿದ್ದಾರೆ. |

ಸಂಖ್ಯೆ: ಅಪಜೀ 11 ಎಫ್‌ಡಿಪಿ 2022

(ಉಮೇಶ್ ವಿ. ಕತ್ತಿ)
ಅರಣ್ಯ ಹಾಗೂ ಆಹಾರ, ನಾಗರೀಕ ಸರಬರಾಜು
ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು